ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	694
ಮಾನ್ಯ ಸದಸ್ಯರ ಹೆಸರು	ಶ್ರೀ ಪಿ.ಆರ್.ರಮೇಶ್
ಉತ್ತರಿಸಬೇಕಾದ ದಿನಾಂಕ	19.02.2018
ಉತ್ತರಿಸುವ ಸಚಿವರು	ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸವಾಗಿರುವ ವರ್ಗ 2ಗೆ ಸೇರಿದ ಹೂವಾಡಿಗ, ಮಾಳಿ, ಮಾಲಗಾರ್, ಹುಗಾರ್, ಹೂಗಾರ್, ತೋಟಿಗಾರ್, ಪುಲ್‌ಮಾಲಿ, ಪೂಲಮಾಲಿ, ಘುಲಾರಿ, ಘೂಲಾರಿ, ಕ್ಷತ್ರಿಯಮಾಳಿ, ಜೀರ್ ಈ ಎಲ್ಲಾ ಜಾತಿಗಳಿಗೆ ಸೇರಿದ ಜನರಿಗೆ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2013ರಿಂದ ಇಲ್ಲಿಯವರೆವಿಗೂ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳಿಂದ ಅನುಕೂಲ ಪಡೆದ ಫಲಾನುಭವಿಗಳ ಮಾಹಿತಿಯನ್ನು ವರ್ಷವಾರು, ಜಿಲ್ಲಾವಾರು ನೀಡುವುದು;	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲಿ ವಾಸವಾಗಿರುವ ವರ್ಗ 2ಎಗೆ ಸೇರಿದ ಮಾಳಿ, ಮಾಲಿ, ಮಾಲಗಾರ್, ಹುಗಾರ್ ಹೂಗಾರ್, ಪುಲ್‌ಮಾಲಿ, ಪೂಲಮಾಲಿ, ಘುಲಾರಿ, ಘೂಲಾರಿ, ಜೀರ್ ಜಾತಿಗಳಿಗೆ ಸೇರಿದ ಜನರಿಗೆ 2013ರಿಂದ ಇಲ್ಲಿಯವರೆಗೆ ವಿವಿಧ ಯೋಜನೆ ಹಾಗೂ ಕಾರ್ಯಕ್ರಮಗಳಿಂದ ಅನುಕೂಲ ಪಡೆದ ಫಲಾನುಭವಿಗಳ ವರ್ಷಾವಾರು ಮತ್ತು ಜಿಲ್ಲಾವಾರು ವಿವರಗಳು www.karnataka.gov.in/dbcdc ನಲ್ಲಿ ಲಭ್ಯವಿರುತ್ತದೆ.
ಆ)	ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಾಸವಾಗಿರುವ ವರ್ಗ 2ಎಗೆ ಸೇರಿದ ಹೂವಾಡಿಗ, ಮಾಳಿ, ಮಾಲಗಾರ್, ಹುಗಾರ್, ತೋಟಿಗಾರ್, ಪುಲ್‌ಮಾಲಿ, ಪೂಲಮಾಲಿ, ಘುಲಾರಿ, ಘೂಲಾರಿ, ಕ್ಷತ್ರಿಯಮಾಳಿ, ಜೀರ್ ಈ ಎಲ್ಲಾ ಜಾತಿಗಳಿಗೆ ಸೇರಿದ ಜನರಿಗೆ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2013ರಿಂದ ಇಲ್ಲಿಯವರೆವಿಗೂ ಶಿಕ್ಷಣ ಹಾಗೂ ಉದ್ಯೋಗ ಅವಕಾಶಗಳನ್ನು ಕಲ್ಪಿಸಿರುವ ಬಗ್ಗೆ ಹಾಗೂ ಈ ಎಲ್ಲಾ ಸಮಾಜಗಳಿಗೆ ಸೇರಿದ ಸಂಘ ಸಂಸ್ಥೆಗಳಿಗೆ 2013 ಇಲ್ಲಿಯವರೆವಿಗೂ ಶೈಕ್ಷಣಿಕ ಹಾಗೂ ಸಾಮಾಜಿಕ ಬೆಳವಣಿಗೆ ಸರ್ಕಾರದಿಂದ ಮಂಜೂರಾತಿ ಹಾಗೂ ಬಿಡುಗಡೆಯಾಗಿರುವ ಅನುದಾನದ ಸಂಪೂರ್ಣ ಮಾಹಿಯನ್ನು ವರ್ಷಾವಾರು, ಜಿಲ್ಲಾವಾರು ನೀಡುವುದು?	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅರಿವು–ಶೈಕ್ಷಣಿಕ ಸಾಲ ಯೋಜನೆ ಮತ್ತು ಸ್ವಯಂ ಉದ್ಯೋಗ ಸಾಲ ಯೋಜನೆಗಳಡಿಯಲ್ಲಿ ಮೇಲ್ಕಂಡ ಸಮುದಾಯದವರು ಸೇರಿದಂತೆ ಹಿಂದುಳಿದ ವರ್ಗಗಳಿಗೆ ಸೇರಿದ ಎಲ್ಲಾ ಸಮುದಾಯದವರಿಗೂ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. ಈ ಸಮುದಾಯದವರಿಗೆ ಪ್ರತ್ಯೇಕವಾಗಿ ಶಿಕ್ಷಣ ಹಾಗೂ ಉದ್ಯೋಗ ಅವಕಾಶಗಳನ್ನು ಕಲ್ಪಿಸುವ ಹಾಗೂ ಸಂಘ ಸಂಸ್ಥೆಗೆ ಶೈಕ್ಷಣಿಕ ಹಾಗೂ ಸಾಮಾಜಿಕ ಬೆಳವಣಿಗೆ ಅನುದಾನ ಒದಗಿಸುವ ಯಾವುದೇ ಯೋಜನೆ ಅನುಷ್ಠಾನಗೊಳಿಸುತ್ತಿರುವುದಿಲ್ಲ.

ಸಂ: ಹಿಂವಕ 319 ಬಿಎಂಎಸ್ 2018

(ಹೆಚ್.ಆಂಜನೇಯ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.